"ಕಲ್ಲಲ್ಲಿ ಒಂದು ರೂಪವನ್ನು ಮಾಡುತ್ತೇವಲ್ಲವೇ, ಅದು ಚಿಕ್ಕ ಮನುಷ್ಯನನ್ನು ದೊಡ್ಡ ಮನುಷ್ಯನಾಗಿ ಬದಲಾಯಿಸುವಂತೆ. ಕೆತ್ತುತ್ತಾ ಇರೋವಾಗ ಬೀಳ್ತಾನೆ ಇರುತ್ತಲ್ಲಾ ಈ ಚೂರುಗಳು, ಇವೆಲ್ಲ ಏನು ಗೊತ್ತಾ? ಹಟ ಅನ್ನೋ ಚೂರು. ಕೋಪ ಅನ್ನೋ ಚೂರು. ಅಹಂಕಾರ ಅನ್ನೋ ಚೂರು. ಅಸೂಯೆ ಅನ್ನೋ ಚೂರು. ದುರಾಸೆ ಅನ್ನೋ ಚೂರು. ಒಂದೊಂದನ್ನೂ ತೆಗೆದು ಹಾಕ್ತಾ ಹಾಕ್ತಾ ಸಣ್ಣ ಮನುಷ್ಯ ತಾನಾಗೇ ದೊಡ್ಡ ಮನುಷ್ಯನಾಗಿ ಬಿಡುತ್ತಾನೆ..."

ಅವರು ಹೇಳಿದ್ದು ಯಾವುದೂ ನನ್ನ ಮೆದುಳಿಗೆ ಹೋಗಲೇ ಇಲ್ಲ. ಆದರೂ ಅರ್ಥವಾದಂತೆ "ಹೌದು... ಹೌದು" ಎಂದು ತಲೆ ಆಡಿಸಿದೆ.

"ಲೋ... ಅಮ್ಮಾ ಕರೆಯೋದು ಕಿವಿಗೆ ಬೀಳಲಿಲ್ಲವೇನೋ? ಬೇಗನೆ ಹೋಗು. ಇಲ್ಲಾಂದ್ರೆ ನಿನ್ನ ಬೆನ್ನಿಗೇ ತೊಟ್ಟಿ ಕಟ್ಟಿ ಬಿಡ್ತಾರೆ..." ಎಂದು ಅತ್ತೆ ಹಾಕಿದ ಕೂಗು ನನ್ನನ್ನು ಈ ಜಗತ್ತಿಗೆ ಎಳೆದು ತಂದಿತು. "ಬಂದೇಮ್ಮಾ..." ಎಂದು ಉತ್ತರದ ದನಿ ಕೊಡುತ್ತಾ ಸ್ನಾನದ ತಟಿಕೆಯೊಳಗೆ ನುಸುಳಿಕೊಂಡೆ.

ನಾಲ್ಕನೆಯ ದಿನ ಸಂಜೆ ತೊಟ್ಟಿ ಪೂರ್ತಿಯಾಗಿ ತಯಾರಾಯಿತು. ಶಾಲೆ ಬಿಟ್ಟು ಹೋದ ಸಮಯದಲ್ಲಿ ಅಮ್ಮನೂ ಅಪ್ಪನೂ ತೊಟ್ಟಿಯ ಸುತ್ತ ನಿಂತಿದ್ದರು. ನೋಡಲು ಮಣ್ಣಿನ ತೊಟ್ಟಿಯಂತೆ ಇತ್ತು. ಕಲ್ಲು ತೊಟ್ಟಿಗೂ ಅದೇ ರೀತಿಯ ಅಂಚುಗಳು. ಅದೇ ರೀತಿಯ ತಿರುವುಗಳು. ಅದೇ ರೀತಿಯ ಆಳ.

ಬೆರಳಿಂದ ಒಳ ಭಾಗವನ್ನು ಮುಟ್ಟಿ ಸವರಿ ನೋಡಿದ ಅಮ್ಮ ಆಶ್ಚರ್ಯದಿಂದ "ನುಣುಪಾಗಿದೆ" ಎಂದರು.

"ಹಸು ತಿವಿದುಬಿಡುತ್ತೋ ಕರ ತಿವಿದುಬಿಡುತ್ತೋ ಅಂತ ಹೆದರಿಹೆದರಿ ಸಾಯ್ತಿದ್ವಿ. ಸದ್ಯ ಇವತ್ತು ಪರಿಹಾರ ಸಿಕ್ತು..." ಎಂದು ನೆಮ್ಮದಿಯ ನಿಟ್ಟುಸಿರುಬಿಟ್ಟಳು ದೊಡ್ಡ ಅತ್ತೆ.

"ಒರಟು ತರಕಲು ಏನೂ ಇಲ್ಲದೆ ಹಸುವಿನ ಬೆನ್ನನ್ನು ಸವರಿದಂತೆ ಇದೆ..." ಅಜ್ಜಿ ತೊಟ್ಟಿಯೊಳಗೆ ಕೈಯನ್ನು ಸವರಿ ನೋಡಿ ಹೇಳಿದಳು.

ಅವರ ನಡುವೆ ನುಸುಳಿ ನಾನು ತೊಟ್ಟಿಯನ್ನು ಮುಟ್ಟಿ ನೋಡಿದೆ. ನನ್ನ ಕೈಯನ್ನು ಪೂರ್ತಿಯಾಗಿ ಒಳ ಇಳಿಸಿಯೇ ತೊಟ್ಟಿಯ ತಳಭಾಗವನ್ನು ಮುಟ್ಟಲು ಸಾಧ್ಯವಾಯಿತು. "ಸಣ್ಣ ಬಾವಿ ಥರಾ ಇದೆ ಅಮ್ಮ" ಎಂದು ಅಮ್ಮನಿಗೆ ಆತುಕೊಂಡೆ.

"ತೊಳಿಯೋದಿಕ್ಕೆ ನೀರು ಬದಲಾಯಿಸೋದಿಕ್ಕೆ ಕಷ್ಟವಾಗೋದಿಲ್ಲವೇ?" ಎಂದು ಕೇಳಿದಳು ಚಿಕ್ಕತ್ತೆ.

"ಇರಲ್ಲಾಮ್ಮ" ಎನ್ನುತ್ತಾ ಮುಂದೆ ಬಂದ ತೊಟ್ಟಿಯವರು ತೊಟ್ಟಿಯ ತಳದ ಅಂಚಿನ ಮೂಲೆಯನ್ನು ಬೆರಳು ಮಾಡಿ ತೋರಿಸಿದರು. "ಇಲ್ಲಿ ಒಂದು ಬೆಣೆ ಇದೆ; ಅದನ್ನ ಎಳೆದರೆ ತೆರದುಕೊಳ್ಳುತ್ತೆ ಮತ್ತೆ ಹಾಕಿದರೆ ಮುಚ್ಚಿಕೊಳ್ಳುತ್ತೆ" ಎಂದು ಹೇಳುತ್ತಲೇ ಮಾಡಿ ತೋರಿಸಿದರು. ಕಲ್ಲೆಂದು ಹೇಳಲಾಗದ ದಪ್ಪವಾದ ಕಡ್ಡಿಯಂತೆ ಇತ್ತು ಅದು.

ಮಾರನೇಯ ದಿನವೇ ಮತ್ತೊಂದು ತೊಟ್ಟಿ ಮಾಡುವ ಕೆಲಸ ತೊಡಗಿತು. ಹಾಲಿನ ವ್ಯಾಪಾರದಲ್ಲೂ ಶಾಲೆಯಲ್ಲೂ ಕಳೆಯುವ ಸಮಯದ ಹೊರತು ಉಳಿದ ಹೊತ್ತೆಲ್ಲ ತೊಟ್ಟಿಯ ಪಕ್ಕದಲ್ಲಿಯೇ ಕೂತಿರುತ್ತಿದ್ದೆ. ಒಬ್ಬ ನೃತ್ಯಗಾತಿಯ ಕಾಲುಗಳಂತೆ ಉಳಿಯ ನಡೆಗಳು ಕಲ್ಲಿನ ಮೇಲೆ ನಡೆಸಿದ ಚಲನೆಗಳು ಕಣ್ಣು ತುಂಬುವ ದೃಶ್ಯವಾಗಿತ್ತು. ತೊಟ್ಟಿಯವರಿಂದ ಮಾತು ಹಾಡು ಉಕ್ಕಿ ಹರಿದು ಬಂದಿತು. "ಇದು ಅಹಂಕಾರದ ನಗು. ಇದು ಆನಂದದ ನಗೆ. ಇದು ವಂಚನೆಯ ನಗು. ಇದು ಸಂಗೀತದ ನಗೆ" ಎಂದು ಹೇಳಿ ಬಗೆಬಗೆಯಾಗಿ ನಕ್ಕು ತೋರಿಸಿದರು.